Cultivation of Forest Land in Ramapuram Range by Girijans.

408. SRI G. RAJU GOWDA (Hanur).—Will the Minister for Forest, Mines and Geology be pleased to state.—

(a) since when, the lands belonging to Forest Department are being cultivated by the persons belonging to Scheduled Tribes of Konanakere of Rampura Hobli, Kollegal Taluk;

(b) the reasons for not recommending for regularisation so far, on those who are cultivating their lands, by the Forest Officers in terms of recent order of Government of 1978 ?

SRI G. MADE GOWDA (Minister for Forest, Mines and Geology).—

(a) The forest lands were being cultivated by people belonging to Scheduled Tribes of Konanakere for the last 50 years.

(b) It is not possible to regularise the unauthorised cultivation, as the encroached land is in the middle of the forest, under the provisions of Forest amended Act, 1978. Besides, there is no provision to regularise the unauthorised cultivation under the provisions of Conservation Act of 1980 of Government of India.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಅರ್ಧ ಶತಮಾನದಿಂದಲೂ ಗಿರಿಜನರು ಕಾಡಿನ ಬುಡದಲ್ಲೇ ಜಮೀನನ್ನು ವ್ಯವಸಾಯ ಮಾಡಿಕೊಂಡು ಬರುತ್ತಿರುವುದರಿಂದಲೂ, ೧೯೭೮ರ ಫಾರೆಸ್ಟ್ ಅಮೆಂಡ್‌ಮೆಂಟಿಗೆ ಅನುಗುಣವಾಗಿರುವುದರಿಂದಲೂ, ಅವರು ಅಲ್ಲಿ ಮನೆಯನ್ನು ಕಟ್ಟಿಕೊಂಡು ವಾಸಮಾಡ ತ್ತಿರುವುದರಿಂದಲೂ, ಅವರು ವ್ಯವಸಾಯ ಮಾಡುತ್ತಿರತಕ್ಕ ಜಮೀನನ್ನು ಅವರಿಗೇ ಏತಕ್ಕೆ ಕೊಡಬಾರದು ?

ಶ್ರೀ ಜಿ. ಮಾದೇಗೌಡ.—ನನ್ಮಲ್ಲಿ ಅರಣ್ಯ ಪ್ರದೇಶ ಸುಮಾರು ೪೫ ಸಾವಿರ ಎಕರೆ ಒತ್ತುವರಿ ಯಾಗಿದೆ.ಯಾರ್ಯಾರು ನಿರ್ಗತಿಕರಾಗಿದ್ದು ಈ ರೀತಿ ಅರಣ್ಯ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಆ ಜಮೀನನ್ನು ಅವರವರಿಗೇ ಖಾಯಂಗೊಳಿಸಬೇಕೆಂದು ನಾವು ಈ ಹಿಂದೆಯೇ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೆವು ಆದರೆ ೧೯೮೦ನೇ ಇಸವಿಯಲ್ಲಿ ಗೌರ್ನಮೆಂಟ್ ಆಫ್ ಇಂಡಿಯಾದಿಂದ ಕಾನೂನು ಬಂದ ಮೇಲೆ ಈಗ ಈ ಅರಣ್ಯ ಪ್ರದೇಶವನ್ನು ನಾವು ಯಾರಿಗೂ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಜಿ. ರಾಜೂಗೌಡ.—ಎಲ್ಲೆಲ್ಲಿ ಸಿ ಅಂಡ್ ಡಿ ಜಮೀನನ್ನು ಫಾರೆಸ್ಟ್ ಇಲಾಖೆಗೆ ಕೊಟ್ಟಿದ್ದಿರೋ ಅದನ್ನು ಮತ್ತೆ ಕಂದಾಯ ಇಲಾಖೆಗೆ ವಾಪಸು ಕೊಡಬೇಕೆಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಒಂದು ಸುತ್ತೋಲೆಯನ್ನು ಕಳುಹಿಸಿರುವುದರಿಂದ ಮತ್ತು ಈ ಭೂಮಿ ಸಿ ಅಂಡ್ ಡಿಗೆ ಒಳಪಟ್ಟಿರುವುದರಿಂದ ಅದಕ್ಕನುಗುಣವಾಗಿ ಇದನ್ನು ಸಕ್ರಮಗೊಳಿಸಬಹುದಲ್ಲವೆ?

ಶ್ರೀ ಜಿ. ಮಾದೇಗೌಡ.—ಸುಮಾರು ೨೦ ಸಾವಿರ ಎಕರೆ ಸಿ ಅಂಡ್ ಡಿ ಲ್ಯಾಂಡ್ ಇದೆ. ಆದರೆ ಇದನ್ನು ವಾಪಸು ಕೊಡಬೇಕೆಂದು ಯಾವ ಆದೇಶವೂ ಇಲ್ಲ. ಅವರು ಎನ್‌ಕ್ರೋಚ್ ಮಾಡಿಕೊಂಡಿದ್ದರೆ ಅದನ್ನು ಅವರಿಗೇ ಖಾಯಂಗೊಳಿಸಬೇಕೆಂದು ಆದೇಶ ಇದೆಯೇ ಹೊರತು ಪೂರ್ತಿ ಜಮೀನನ್ನೇ ರೆವಿನ್ಯೂ ಇಲಾಖೆಗೆ ಕೊಡಬೇಕೆಂದು ಎಲ್ಲೂ ಇಲ್ಲ.

ಶ್ರೀ ಜಿ. ರಾಜೂಗೌಡ. —ಈ ಭೂಮಿ ಸಿ ಅಂಡ್ ಡಿಗೆ ಸೇರಿರುವುದರಿಂದ ಮತ್ತು ಅದನ್ನು ಇವರು ಎನ್‌ಕ್ರೋಚ್ ಮಾಡಿಕೊಂಡಿರುವುದರಿಂದ ಇದನ್ನು ಅವರಿಗೇ ಕೊಡಬಹುದಲ್ಲವೆ?

ಶ್ರೀ ಡಿ.ಟಿ. ಮಾಯಣ್ಣ.—ಮನ್ನಾ ಜಂಗ್ಲಿ ಭೂಮಿಯನ್ನು ನೀವು ತೆಗೆದುಕೊಳ್ಳಬೇಕೆಂದು ಸರ್ಕಾರದಿಂದ ಆದೇಶವಾಗಿದೆ. ಅದನ್ನು ನೀವು ತೆಗೆದುಕೊಳ್ಳುತ್ತಿದ್ದೀರಿ. ಆದರೆ ಕೆಲವು ರೈತರು ಪಕ್ಕದಲ್ಲಿರತಕ್ಕ ಜಮೀನನ್ನು ಎನ್‌ಕ್ರೋಚ್ ಮಾಡಿಕೊಂಡಿದ್ದರೆ ಆ ಜಮೀನನ್ನೂ ಕೂಡ ನಿಮ್ಮ ಇಲಾಖೆಯವರು ಹೋಗಿ ಕಿತ್ತುಕೊಂಡು ಈಗ ಅವರನ್ನು ಭೂಹೀನರನ್ನಾಗಿ ಮಾಡಿ ಬಹಳ ಕಷ್ಟಕ್ಕೀಡು

ಮಾಡಿದ್ದಾರೆ. ಹಿಂದೆ ಇದೇ ಸದನದಲ್ಲಿ ಮಾನ್ಯ ರಾಮೇಗೌಡರು ಫಾರೆಸ್ಟ್ ಮಿನಿಸ್ಟರ್ ಆಗಿದ್ದಾಗ ಯಾರು ಈ ಫಾರೆಸ್ಟ್ ಲ್ಯಾಂಡನ್ನು ಎನ್‌ಕ್ರೋಚ್ ಮಾಡಿಕೊಂಡಿರುತ್ತಾರೆ. ಅವರಿಗೇಕೆ ಅದನ್ನು ಕೊಡಬೇಕೆಂದು ಹೇಳಿದ್ದೆವು. ಅದರಂತೆ ನೀವು ಮಾಡುತ್ತೀರಾ?

ಶ್ರೀ ಜಿ. ಮಾದೇಗೌಡ.—೧೯೮೦ನೇ ಸೆಂಟ್ರಲ್ ಆಕ್ಟ್ ಪ್ರಕಾರ ಅರಣ್ಯ ಪ್ರದೇಶವನ್ನು ರಾಜ್ಯ ಸರ್ಕಾರಗಳು ಯಾರಿಗೂ ಕೊಡುವುದಕ್ಕೆ ಅಧಿಕಾರವೇ ಇಲ್ಲ ಅಂತ ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಡಿ.ಟಿ. ರಾಮು.—ಅದು ಅರಣ್ಯ ಪ್ರದೇಶವಲ್ಲ. ಮನ್ನಾ ಜಂಗ್ಲಿ ಪ್ರದೇಶ. ಅದು ರಿಸರ್ವ್ ಫಾರೆಸ್ಟ್. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದು ರೆವಿನ್ಯೂ ಡಿಪಾರ್ಟ್‌ಮೆಂಟ್ ನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಅಂತ ಉಳಿದುಕೊಂಡಿತ್ತು. ಅಂಥಾದ್ದನ್ನು ಕೆಲವು ರೈತರು ಎನ್‌ಕ್ರೋಚ್ ಮಾಡಿಕೊಂಡಿದ್ದಾರೆ. ಆ ಜಮೀನನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಗೆ ಸೇರಿಸಿಕೊಳ್ಳಬೇಕೆಂದು ಅವರು ಯಾವುದೋ ಒಂದು ಲಿಸ್ಟ್ ಮಾಡಿ ಕಳುಹಿಸಿದ್ದಾರೆ. ಅಂಥ ರೈತರಿಗೆ ಅದೇ ಜಮೀನನ್ನು ಖಾಯಂ ಮಾಡಿಸಿ ಕೊಡುತ್ತೀರಾ ? ಎಕ್ಸ್‌ಪರ್ಟ್ ಕಮಿಟಿ ಮಾಡಿ ಈ ದೇಶದಲ್ಲಿ ಅರಣ್ಯ ಪ್ರದೇಶ ಎಷ್ಟಿರಬೇಕು, ಯಾವುದು ಅರಣ್ಯ ಮಾಡುವುದಕ್ಕೆ ಅನುಕೂಲವಾಗಿದೆ, ಯಾವುದು ಅನಾನುಕೂಲವಾಗಿದೆ ಎಂಬುದನ್ನು ನೋಡಿ, ಯಾವ ರೈತರು ಈ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಅವರೇ ಕೊಡಬೇಕೆಂದು ನಾನು ಹಿಂದೆ ಸಲಹೆ ಕೊಟ್ಟಿದ್ದೆ. ಆದರೆ ಇವತ್ತು ನಿಮ್ಮ ಇಲಾಖೆಯವರು ಈ ಜಮೀನುಗಳನ್ನು ಬಿಡಿಸುತ್ತಿದ್ದಾರೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಜಿ. ಮಾದೇಗೌಡ.—ಸನ್ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ್ದೇನೆ. ಫಾರೆಸ್ಟ್ ಜಮೀನಿಗೆ ಸಂಬಂಧಪಟ್ಟಹಾಗೆ ಯಾವುದಾದರೂ ಎನ್‌ಕ್ರೋಚ್‌ಮೆಂಟ್ ಇದ್ದರೆ, ಫಾರೆಸ್ಟ್ ಜಮೀನು ಆಕ್ಟ್ ಪ್ರಕಾರ, ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಪ್ರಕಾರ ಕೊಡುವುದಕ್ಕೆ ಬರುವುದಿಲ್ಲ. ಗೌರ್ನಮೆಂಟ್ ಆಫ್ ಇಂಡಿಯಾ ಎಕ್ಸ್‌ಪರ್ಟ್ ಕಮಿಟಿಯನ್ನು ಕೇಳಿದ್ದೇವೆ. ಎಲ್ಲೆಲ್ಲಿ ಅಕ್ರಮವಾಗಿ ಎನ್‌ಕ್ರೋಚ್‌ಮೆಂಟ್ ಆಗಿರುತ್ತದೆ, ಅದು ನಿರ್ಗತಿಕರು ಎನ್‌ಕ್ರೋಚ್ ಮಾಡಿದ್ದರೆ, ಅದನ್ನು ಕೊಡಬೇಕೇ ಬೇಡವೇ ಎನ್ನುವುದನ್ನು ವಿಮರ್ಶೆಮಾಡಿ ಕಮಿಟಿ ಮುಂದೆ ಇಟ್ಟು ಕೇಳಿದ್ದೇವೆ. ಅವರಿಂದ ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿದ್ದರೂ ಕೊಡಬಹುದು ಎನ್ನುವ ಆದೇಶ ಬಂದರೆ, ನಾವು ಅವರಿಗೆ ರಕ್ಷಣೆ ಕೊಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬಹುದೇ ವಿನಃ ನಾವೇ ಕೊಡುವುದಕ್ಕೆ ಅಧಿಕಾರವಿಲ್ಲ.

ಶ್ರೀ ಡಿ.ಟಿ. ರಾಮು.—ಮಾನ್ಯ ಅಧ್ಯಕ್ಷರೇ ೫೦ ವರ್ಷಗಳಿಂದ ಅಲ್ಲಿ ಹರಿಜನರೇ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ೧೯೮೦ರಲ್ಲಿ ಅವರ ಹೆಸರಿಗೆ ಪಹಣಿಯನ್ನು ಕೂಡ ಕೊಟ್ಟಿರುತ್ತಾರೆ. ಈ ಕಾರಣದಿಂದ ಯಾರು ೧೯೮೦ರಿಂದ ಈಚೆಗೆ ವ್ಯವಸಾಯ ಮಾಡಿಕೊಂಡಿರುತ್ತಾರೋ ಅಂಥವರಿಗೆ ಅವಕಾಶವಿಲ್ಲ. ೫೦ ವರ್ಷಗಳಿಂದ ಯಾರು ವ್ಯವಸಾಯ ಮಾಡಿಕೊಂಡಿರುತ್ತಾರೋ ಅಂಥವರ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಬರೆದು, ಅನುಮತಿಯನ್ನು ಪಡೆದು ಆ ಜಮೀನುಗಳನ್ನು ಅವರಿಗೇನೇ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರಾ ಸ್ವಾಮಿ ?

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ ನಾನು ಹೇಳಿದ್ದೇನೆ. ಈ ರೀತಿಯಾಗಿ ಳಿಜಿ ಸಾವಿರ ಎಕರೆಯಷ್ಟು ಭೂಮಿ ಇರುತ್ತದೆ. ನಾವು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಯಾರು ಯಾರು ಬಹಳ ವರ್ಷಗಳಿಂದ ವ್ಯವಸಾಯ ಮಾಡಿಕೊಂಡಿರುತ್ತಾರೋ ಅಂಥವರನ್ನು ಎವಿಕ್ಟ್ ಮಾಡಬೇಡಿ. ಮುಂದೆ ಎನ್‌ಕ್ರೋಚ್‌ಮೆಂಟ್ ಆಗದಂತ ರೀತಿಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ೧೯೮೦ರಿಂದ ಈಚೆಗೆ ಎನ್‌ಕ್ರೋಚ್ ಮಾಡಿರುವವರಿಗೆ ಆಲ್ ಇಂಡಿಯಾ ಗೌರ್ನಮೆಂಟ್ ಆಕ್ಟ್ ಪ್ರಕಾರ ಕೊಡುವುದಕ್ಕೆ ಅಧಿಕಾರವಿಲ್ಲವೆಂದು ಹೇಳುತ್ತೇನೆ.

ಶ್ರೀ ಡಿ.ಟಿ. ರಾಮು.—ಕೊಡತಕ್ಕಂಥದ್ದಕ್ಕೆ ಅಧಿಕಾರವಿಲ್ಲದಿದ್ದರೆ ಇರತಕ್ಕಂಥದ್ದನ್ನು ಅವರಿಗೇನೇ ಎಂದು ಮಾಡಿಬಿಡಿ.

ಶ್ರೀ ಜಿ. ಮಾದೇಗೌಡ.—ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಕಮಿಟಿ ಮಾಡಿ ಯಾರು ಯಾರಿಂ ಜಮೀನನ್ನು ಪಡೆಯುವುದಕ್ಕೆ ಯೋಗ್ಯರಿದ್ದಾರೆ, ಅರ್ಹರಿದ್ದಾರೆ ಅದನ್ನು ತೀರ್ಮಾನ ಮಾಡಿ ಕೇಳಿ

ದ್ದೇವೆ. ಸರ್ಕಾರದಿಂದ ಆಜ್ಞೆಬಂದ ಮೇಲೆ, ಯಾರಿಗೆ ಕೊಡಬೇಕೆಂಬುದನ್ನು ವಿಮರ್ಶೆ ಮಾಡಿ ಕೊಡುತ್ತೇವೆ.

ಶ್ರೀ ಜಿ. ರಾಜೂಗೌಡ.—ರಾಜ್ಯ ಸರ್ಕಾರದ ಪರವಾನಿಗೆಯನ್ನು ಪಡೆದು ಅರಣ್ಯಮದ್ಯದಲ್ಲಿರ ತಕ್ಕಂಥ ಹತ್ತಾರು ಎಕರೆ ಪ್ರದೇಶಗಳನ್ನು ಆಕ್ರಮ ಸ್ವಾಧೀನಕ್ಕೆ ತೆಗೆದುಕೊಂಡು ಅಲ್ಲಿ ಕಲ್ಲುಗಳನ್ನು ತೆಗೆದು ಪ್ಲಾಟ್ ರೇಟ್‌ನಲ್ಲಿ ರವಾನೆ ಮಾಡತಕ್ಕಂಥದ್ದು, ೧೯೮೦ನೇ ಕನ್‌ಸರ್‌ವೇಷನ್ ಆಕ್ಟ್‌ಗೆ ವಿರುದ್ಧವಲ್ಲವೇ ಸ್ವಾಮಿ ?

ಶ್ರೀ ಜಿ ಮಾದೇಗೌಡ.—ವರದಿ ಇನ್ನೂ ಕೈಗೆ ಬಂದಿಲ್ಲ. ಹಿಂದೆ ಕೊಟ್ಟಿರತಕ್ಕಂಥದ್ದು ಇರುತ್ತದೆ. ಆ ಅವಧಿಯು ಮುಗಿದ ಮೇಲೆ ಮುಂದೆ ಕೊಡುವುದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಜಿ. ರಾಜೂಗೌಡ.—೫೦ ವರ್ಷ ವ್ಯವಸಾಯ ಮಾಡುತ್ತಿದ್ದಂಥವರಿಗೆ ಅವರವರಿಗೆ ಆ ಜಮೀನುಗಳನ್ನು ಕೊಡುವುದಕ್ಕೆ ನೀವು ಶಿಪಾರಸು ಮಾಡುವುದು ನಿಮ್ಮ ಕರ್ತವ್ಯವಲ್ಲವೇ ಸ್ವಾಮಿ?

ಶ್ರೀ ಜಿ. ಮಾದೇಗೌಡ —ಅದನ್ನು ನಾನು ಮೊದಲೇ ಹೇಳಿದ್ದೇನೆ. ಯಾರಿಗೆ ಕೊಡಬೇಕು, ಯಾರಿಗೆ ಬಿಡಬೇಕು ಎನ್ನುವುದನ್ನು ವಿಮರ್ಶೆ ಮಾಡುತ್ತಿದ್ದೇವೆ. ಯಾರು ನಿಜವಾಗಿಯೂ ಅರ್ಹರಾಗಿರುತ್ತಾರೆ ಅವರ ಬಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೇವೆಂದು ಇರತಕ್ಕಂಥ ಮಾತನ್ನು ಮೊದಲೇ ಹೇಳಿದ್ದೇನೆ.

Fixation of rates for Hybrid Cocoons.

544. SRI ANDANAIAH (Kunigal).—Will the Minister for Finance and Tourism be pleased to state.—

(a) the comparative prices fixed by Government for the cross breed cocoon and the Mysore race Cocoon ; (per K. G.)

(b) whether action taken to purchase all the Mysore race Cocoon by Government itself where the said cocoon is grown ;

(c) the action taken by Government to provide relief measures in case, Government is not in a position to purchase the full quota of seed cocoon grown by the Sericulturists ?

SRI M. VEERAPPA MOILY (Minister for Finance & Tourism).—

(a) The average price of Cross breed Cocoon during 1980-81 is Rs. 23-50 per K. G. The price of Mysore race Cocoon since 10-6-1981 is Rs. 30/-per K. G.

(b) No.

(c) Permission is accorded to sell the Mysore race cocoon in other markets of the State for purposes of reeling to avoid hardship to the Sericulturists of areas where Mysore race seed is grown.

ಶ್ರೀ ಅಂದಾನಯ್ಯ.—ಸ್ವಾಮಿ ಕರ್ನಾಟಕ ರಾಜ್ಯದಲ್ಲಿ ಮೈಸೂರು ತಳಿ ಬಿತ್ತನೇ ಗೂಡಿನ ಬೀಜಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಎಕರೆಗಳಲ್ಲಿ ಬೆಳೆಯುತ್ತಾರೆಂಬುದನ್ನು ದಯವಿಟ್ಟು ತಿಳಿಸುತ್ತೀರಾ ಸ್ವಾಮಿ ?.

ಶ್ರೀ ಎಂ. ವೀರಪ್ಪ ಮೊಯಿಲಿ.—ರೇಷ್ಮೆ ಬಿತ್ತನೆ ಗೂಡಿನ ಬೆಳೆಯಬಗ್ಗೆ ನನ್ನ ಹತ್ತಿರ ಇನ್‌ಫರ್‌ಮೇಷನ್ ಇಲ್ಲ. ಮತ್ತೊಂದು ಬಾರಿ ಕಳುಹಿಸಿಕೊಡಿ, ಇನ್‌ಫರ್‌ಮೇಷನ್ ತರಿಸಿಕೊಡುತ್ತೇನೆ.